**ಇಂದು ದಿನಾಂಕ:26.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 14 ನೇ ಪ್ರತಿವಾದಿ ಪರ ಶ್ರೀ.ಎಸ್.ಎಸ್ ವಕೀಲರಿಂದಃ**

ನನ್ನ ತಂದೆಯ ಹೆಸರು ಸಿದ್ದೇಗೌಡ ಮತ್ತು ತಾತನ ಹೆಸರು ನಿಂಗೇಗೌಡ. ನನ್ನ ತಂದೆಗೆ ಇಬ್ಬರು ಹೆಣ್ಣು ಮಕ್ಕಳು ಮಾತ್ರ, ಸಣ್ಣಮ್ಮ ಮತ್ತು ನಾನು ಅಕ್ಕಯ್ಯಮ್ಮ. ನನಗೆ 4 ಜನ ಮಕ್ಕಳು. ನನ್ನ ಗಂಡ ಪಶುವತಿ ಗ್ರಾಮದವರು. ಮದುವೆಯಾದ ನಂತರ ನಾನು ಗಂಡನ ಮನೆಯಲ್ಲಿ ಇರಲಿಲ್ಲ. ನನ್ನ ಸಹೋದರಿ ಸಣ್ಣಮ್ಮರವರನ್ನು ಅಂಕನಹಳ್ಳಿಯವರಿಗೆ ಮದುವೆ ಮಾಡಲಾಗಿದೆ. ಈ ದಾವೆಯನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ತಾಯಿ ಬದುಕಿದ್ದಾಗಲೇ ನನ್ನ ಮತ್ತು ನನ್ನ ತಂಗಿ ಮಕ್ಕಳಿಗೆ ಭಾಗ ಕೊಟ್ಟಿದ್ದಾರೆ ಎಂದರೆ ನನಗೆ ಭಾಗ ಬರಬೇಕು. ದಾವಾ ಐಟಂ ನಂಬರ್ 3 ರ ಆಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂದರೆ ನನಗೆ ಮರೆತು ಹೋಗಿದೆ, ಆದರೆ ನನ್ನ ತಂದೆಯ ಆಸ್ತಿ.

ದಾವಾ ಐಟಂ ನಂಬರ್ 3 ರ ಆಸ್ತಿ ಮೂಲತಃ ದೊಳ್ಳ ಎಂಬುವರಿಗೆ ಸೇರಿದ್ದು ಎಂದರೆ ಸರಿ, ನನ್ನ ತಂದೆಯ ಸಿದ್ದೇಗೌಡ ಅಲಿಯಾಸ್ ದೊಳ್ಳ ಎಂದು ಕರೆಯುತ್ತಿದ್ದರು. ನನ್ನ ತಂದೆಯನ್ನು ದೊಳ್ಳ ಎಂತಲೂ ಕರೆಯುತ್ತಿದ್ದರು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಬರೆಸಿರಬಹುದು. ದೊಳ್ಳ ಮತ್ತು ಸಿದ್ದೇಗೌಡ ಬೇರೆ ಬೇರೆ ವ್ಯಕ್ತಿಗಳು ಅವರಿಬ್ಬರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದೊಳ್ಳ ಮತ್ತು ಸಿದ್ದೇಗೌಡ ಇಬ್ಬರೂ ಒಂದೇ ವ್ಯಕ್ತಿ ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ದಾವಾ ಐಟಂ ನಂಬರ್ 3 ರಲ್ಲಿ ಮೂಲತಃ ಎಷ್ಟು ವಿಸ್ತೀರ್ಣ ಇತ್ತು ಮತ್ತು ಅದರ ಚೆಕ್ಕುಬಂಧಿ ನನಗೆ ವಯಸ್ಸಾದ ಕಾರಣ ಮರೆತು ಹೋಗಿದೆ.

ದಾವಾ ಐಟಂ ನಂಬರ್ 3 ರ ಆಸ್ತಿಯನ್ನು ದೊಳ್ಳ ಎಂಬುವರು ಅವರ ಜೀವಿತಾವಧಿಯಲ್ಲಿ ಭೋಗ್ಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಭೋಗ್ಯ ಬಿಡುಗಡೆ ಮಾಡಿಸಿಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ನಮ್ಮ ತಂದೆ ಯಾರಿಗೂ ಭೋಗ್ಯ ಮಾಡಿಲ್ಲ. ದಾವಾ ಐಟಂ ನಂಬರ್ 3 ರ ಆಸ್ತಿಯನ್ನು ನನ್ನ ತಾಯಿ ನನ್ನ ಮತ್ತು ನನ್ನ ತಂಗಿಯ ಮಕ್ಕಳೆಲ್ಲರಿಗೂ 1995-96 ರಲ್ಲಿ ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸುಳ್ಳು.

ವಿಭಾಗದ ಪ್ರಕಾರ ನನ್ನ ತಾಯಿ 4 ಎಕರೆ ಉಳಿಸಿಕೊಂಡು ಪ್ರತಿವಾದಿಗೆ 3 ಮತ್ತು 9 ರವರಿಗೆ ತಲಾ ಒಂದೊಂದು ಎಕರೆ ಕೊಟ್ಟಿದ್ದು ಅದರೆ ಪ್ರಕಾರ ಎಂ.ಆರ್ ನಂಬರ್ 51/1998-99 ರ ಪ್ರಕಾರ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. 3 ನೇ ಪ್ರತಿವಾದಿ ಎಂ.ಆರ್ ನಂಬರ್ 86/1998-99 ರ ಪ್ರಕಾರ ಖಾತೆಯಾಗಿದೆ ಎಂದರೆ ಸುಳ್ಳು. ಪ್ರತಿವಾದಿ 3 ಮತ್ತು 9 ರವರ ಹೆಸರಿಗೆ 2005-06 ರವರೆಗೆ ತಲಾ ಒಂದೊಂದು ಎಕರೆ ಆಸ್ತಿ ಇತ್ತು ಎಂದರೆ ಸುಳ್ಳು. 3 ನೇ ಪ್ರತಿವಾದಿಗೆ 1 ಎಕರೆ ಆಸ್ತಿಯನ್ನು ಬೆಟ್ಟದಪುರ ಗ್ರಾಮದ ತೋಟಪ್ಪಶೆಟ್ಟಿ ರವರ ಮಗ ಅಶೋಕ ಅಂದರೆ 14 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಕ್ರಯಕ್ಕೆ ಮಾಡಿಕೊಂಡ ದಿನದಿಂದಲೂ 14 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು. 14 ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು ನನ್ನ ಮಕ್ಕಳು ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾಯಿ ಈಗಾಗಲೇ ಭಾಗ ಮಾಡಿಕೊಟ್ಟಿರುವುದರಿಂದ ನನಗಾಗಲೀ ನನ್ನ ಸಹೋದರಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 11 ನನ್ನ ಮಗ. ನನ್ನ ಗಂಡ ತೀರಿಕೊಂಡ ನಂತರ 2 ನೇ ಮದುವೆ ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ಆ ವಿಷಯ ಗೊತ್ತಾದರೆ ನನಗೆ ಆಸ್ತಿ ಬರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**